ಕಳಿಸಿದ ಮಧುರಮತಿ ವಿರಚಿತ ಸಾಲುಗಳು ಎಂಬುದು ಮಿಂಚಿನಂತೆ ಹೊಳೆಯಿತು. ಎಲಾ ಇದೆಂಥ ಸಾಮ್ಯತೆ! ಕೃತಿಚೌರ್ಯವೆ? ಕಾಕತಾಳೀಯ ಇದ್ದೀತು ಎಂದು ಸಮಾಧಾನ ಮಾಡಿಕೊಂಡನು. ಏನಾಶ್ಚರ್ಯ! ಮುಂದಿನ ಸಾಲು ಹೇಳಿದಾಗಲೂ ಅದರ ಮುಂದಿನ ಸಾಲನ್ನು ನೆರೆದ ಜನರ ನಡುವೆ ಮತ್ಯಾರೋ ಅಂದರು! ಸುಮಾರು ಅರ್ಧ ಗಂಟೆಯವರೆಗೂ ಹೀಗೆ ನಡೆಯಿತು. ಕಾವ್ಯವಾಚನದ ಹುರುಪಿನಲ್ಲಿ ಕಣ್ಣುಮುಚ್ಚಿದ್ದ ಭೂಷಣ ಕವಿಗೆ ಜನರ ನಡುವಿನ ಧ್ವನಿಯು ಕಾವ್ಯವನ್ನು ಆಸ್ವಾದಿಸುವ ಮಹಾಜನತೆಯ ಜೈಕಾರವೆಂದು ತಿಳಿದನು. ಅಷ್ಟರಲ್ಲಿ ಮಹಾರಾಜನಿಗೆ ಏನೋ ಅವಾಂತರವಾಗಿರುವುದು ಸ್ಪಷ್ಟವಾಯಿತು. ಮಧುರಮತಿಯು ನವಿಲೇಂದುಭೂಷಣ ಮಹಾಕವಿಯ ಸಾಲುಗಳನ್ನು ಕದ್ದಿದ್ದಾನೆ! ಎಂಜಲು ಸಾಲುಗಳನ್ನು ತನ್ನ ಪ್ರೀತಿಯ ರಾಣಿಗೆ ಉಣಿಸುವಂತೆ ಮಾಡಿದ್ದಾನೆ, ರಾಜದ್ರೋಹಿ! ಎಂದು ಹಲ್ಲುಕಡಿದನು. ಮಹಾರಾಜನ ಚಡಪಡಿಕೆ ಮತ್ತು ಕೋಪವನ್ನು ಗಮನಿಸಿದ ಮಹಾಮಂತ್ರಿಯು ಘಾತವಾಗಿರುವುದನ್ನು ಗ್ರಹಿಸಿದನು. ವಿಷಯವು ಬಹಿರಂಗವಾದರೆ ರಾಜನ ಗೌರವಕ್ಕೇ ಚ್ಯುತಿ ಬರುವುದನ್ನು ಮನಗಂಡು ತಕ್ಷಣವೇ ಎದ್ದು ಮಹಾರಾಜನ ಕಿವಿಯಲ್ಲಿ ಶಾಂತಿಮಂತ್ರವನ್ನು ಉಸುರಿದನು. ಸ್ವರಚಿತವೆಂದು ಕಳುಹಿಸಿದ ಸಾಲುಗಳು ತನ್ನವಲ್ಲ ಎಂದು ಕಿರಿಯರಾಣಿಗೆ ತಿಳಿದು ಅವಳ ಕಣ್ಣಲ್ಲಿ ತಾನು ಕೇವಲವಾಗುವುದನ್ನು ನೋಡಲಾರದೇ ಮಹಾರಾಜನು ಒಳಗಿಂದೊಳಗೇ ಅವಮಾನದಿಂದ ಕುದಿಯಲು ಅದನ್ನು ಗ್ರಹಿಸಿದ ಮಹಾಮಂತ್ರಿಯು "ಮಹಾರಾಜರು ವಿಶ್ರಾಂತಿ ಬಯಸುವರು" ಎಂದು ಸ್ವಯಂಘೋಷಿಸಿಬಿಟ್ಟನು. ಮಹಾರಾಜನು ವಿಶ್ರಾಂತಿಗೃಹಕ್ಕೆ ತೆರಳಿದನು. ಮಹಾಮಂತ್ರಿಯೂ ಹಿಂಬಾಲಿಸಿ ಹೊರಟನು.



ಕಿರಿಯ ರಾಣಿ ಮತ್ತು ಸೇನಾಪತಿ ನೆರೆದ ಒಡ್ಡೋಲಗದಲ್ಲಿ ಕಣ್ಣುಗಳಲ್ಲೆ ಪ್ರೇಮ ನಿವೇದಿಸಿಕೊಳ್ಳುತ್ತಾ ಅದೆಷ್ಟು ಮೈಮರೆತಿದ್ದರೆಂದರೆ ಆ ಕಾವ್ಯಸಾಲುಗಳು ತಮ್ಮ ಕೈಯಿಂದ ಸೋರಿಕೆಯಾದವು ಎನ್ನುವುದು ಅವರ ಗ್ರಹಿಕೆಗೇ ಬರಲಿಲ್ಲ!

★★★

ಮಹಾರಾಜನು ಮಧುರಮತಿಯನ್ನು ಮುಗಿಸುವ ಮಾತನಾಡಿದಾಗ ಇದು ನಾಜೂಕು ಸಂದರ್ಭವಾದ್ದರಿಂದ ಶಾಂತಚಿತ್ತರಾಗಿರಲು ಮಂತ್ರಿಯು ಪರಿಪರಿಯಾಗಿ ಭಿನ್ನವಿಸಿಕೊಂಡನು. ಚಾಣಾಕ್ಷನಾದ ಮಂತ್ರಿಯು ಸನ್ನಿವೇಶವನ್ನು ಗ್ರಹಿಸಿ ಕ್ಷಿಪ್ರದಲ್ಲಿ ಕಾರ್ಯಪ್ರವರ್ತನಾದನು. ಕಾವ್ಯಸಮ್ಮೇಳನದಲ್ಲಿ ಸಾಲುಗಳನ್ನು ಮುಂಚಿತವಾಗಿಯೇ ಉಚ್ಚರಿಸಿದಂಥವರನ್ನು ಪತ್ತೆ ಹಚ್ಚಿ ಅವರನ್ನೂ ಗೂಢಾಚಾರರ ಮೂಲಕ ಅಪಹರಿಸಿ ತನ್ನ ಮಹಲಿನಲ್ಲಿ ವಿಚಾರಣೆ ನಡೆಸಿದನು. ಕಾವ್ಯದ ಸಾಲುಗಳನ್ನು ಉಚ್ಚರಿಸಿದವರು ತಮಗೆ ಅವು ಪ್ರಾಪ್ತವಾದ ಮೂಲವನ್ನು ತಿಳಿಸಿದಾಗ ತನಿಖೆ ಮುಂದುವರಿಸುತ್ತಾ ಅರ್ಧ ರಾಜ್ಯವೇ ಬಂಧನಕ್ಕೊಳಗಾಗುವ ಪ್ರಸಂಗ ಬಂತು. ಅವರಲ್ಲಿ ಅರ್ಧದಷ್ಟು ಮಹಿಳೆಯರು! ವಸಂತಸೇನೆಯ ಬಾಗಿಲಿಗೆ ರಾಜಭಟರು ತಲುಪುವುದೂ ತಡವಾಗಲಿಲ್ಲ. ಅರಮನೆಗೆ ಬರುವ ಮುನ್ನ ಮಹಾಕವಿಗಳು ಒಂದೆರಡು ದಿನ ವಸಂತಸೇನೆಯ ಅತಿಥಿಯಾಗಿ ತಂಗಿದ್ದು ಅಲ್ಲಿ ಚಿಕ್ಕ ಕಾವ್ಯಗೋಷ್ಠಿಯೇ ನಡೆದಿದ್ದು ಬಹಿರಂಗವಾದೊಡನೆ ನಿಗೂಢತೆಯು ಸ್ವಯಂ ಅನಾವರಣಗೊಳ್ಳತೊಡಗಿತು. ಕಾವ್ಯಸಾಲುಗಳು ವಸಂತಸೇನೆಯ ಶಯ್ಯಾಗಾರದಿಂದಲೇ ಸಾಂಕ್ರಾಮಿಕವಾದದ್ದು ಮಂತ್ರಿಗೆ ಅರಿವಾಯಿತು. ಆದರೆ ವಸಂತಸೇನೆಯ ಬಳಿ ರಾಜಮುದ್ರೆಯೊತ್ತಿದ ಕಾವ್ಯಪಂಕ್ತಿಗಳು ಎಲ್ಲಿಂದ ಬಂದವು? ತನಿಖೆ ಅಂತಿಮ ಹಂತಕ್ಕೆ